ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ನಿಮ್ಮ ಅಧಿಕಾರದ ಸಂಪೂರ್ಣ ಉಪಯೋಗ ಮಾಡಿಕೊಂಡಿದ್ದೀರಿ. ಆಡಳಿತ ಯಂತ್ರದ ಸಂಪೂರ್ಣ ದುರುಪಯೋಗ ಮಾಡಿಕೊಂಡಿದ್ದೀರಿ. ಅದರಲ್ಲಿ ಅನುಮಾನವಿಲ್ಲ. ನಿಮಗೆ ಮೌಲ್ಯ ಇಲ್ಲ. ಬರೀ ಮುಖವಾಡ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಹಣ ಬಿಡುಗಡೆ ಯಾವಾಗ ಮಾಡುತ್ತೀರೆಂದು ಹೇಳಬೇಕು.

ಅಧ್ಯಕ್ಷರು : ಶಂಕರಲಿಂಗೇಗೌಡರು ಅಷ್ಟೆಲ್ಲಾ ಹೇಳಿದ್ದಾರೆ. ಆ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆಂದು ಹೇಳಿ.

ಶ್ರೀ ವೈಜನಾಥ್ ಪಾಟೀಲ್ : ಸರ್ಕಾರದಿಂದ ಯಾವ ಹಣ ಬಿಡುಗಡೆ ಆಗಬೇಕೋ ಆ ಎಲ್ಲಾ ಹಣ ಬಿಡುಗಡೆ ಆಗಿದೆ. ಯಾವುದೂ ಉಳ್ಯೂ ಇಲ್ಲ. ಹೊಸ ಎಲೆಕ್ಟೆಡ್ ಮೆಂಬರ್ಸ್ ಬಂದಿದ್ದಾರೆ. ಟ್ಯಾಕ್ಸ್ ಕೂಡ ವಸೂಲ್ ಆಗಿದೆ. ಸರ್ಕಾರದಿಂದ ಯಾವುದು ಬಿಡುಗಡೆ ಮಾಡಬೇಕಾಗಿತ್ತು. ಅದೆಲ್ಲಾ ಬಿಡುಗಡೆ ಮಾಡಿದ್ದೇವೆ. ಒಂದು ಪೈಸೆ ಕೂಡ ಇಟ್ಟುಕೊಂಡಿಲ್ಲ.

ನಾಗರೀಕ ಹಕ್ಕು ಸಂರಕ್ಷಣಾ ಜಾರಿ ನಿರ್ದೇಶನಾಲಯದ ಕಛೇರಿ.

105 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಜಿ.ಎಫ್. ನಗರವು ಮೀಸಲು ಕ್ಷೇತ್ರವಾಗಿದ್ದು ಅಧಿಕ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರೇ ವಾಸಿಸುತ್ತಿರುವ ಈ ನಗರದಲ್ಲಿ ನಾಗರೀಕ ಹಕ್ಕು ಸಂರಕ್ಷಣಾ ಜಾರಿ ನಿರ್ದೇಶನಾಲಯದ ಒಂದು ಕಛೇರಿಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಬಂದಿದ್ದಲ್ಲಿ ಕಛೇರಿಯನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯವು ಬೆಂಗಳೂರು, ಮೈಸೂರು ಮಂಗಳೂರು, ಗುಲ್ಬರ್ಗಾ, ದಾವಣಗೆರೆ, ಮತ್ತು ಬೆಳಗಾಂನಲ್ಲಿ ಪ್ರಾದೇಶಿಕ ಘಟಕಗಳನ್ನು ಹೊಂದಿದೆ. ಬೆಂಗಳೂರು ಪ್ರಾದೇಶಿಕ ಘಟಕವು ಬೆಂಗಳೂರು, ಬೆಂಗಳೂರು ಗ್ರಾಮಾಂತರ ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು, ಮೈಸೂರು ಘಟಕವು ಮೈಸೂರು, ಮಂಡ್ಯ ,ಹಾಸನ ಮತ್ತು ಕೊಡಗು ಜಿಲ್ಲೆಗಳನ್ನು, ಮಂಗಳೂರು ಘಟಕವು ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು, ದಾವಣಗೆರೆ ಘಟಕವು ಚಿತ್ರದುರ್ಗ, ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳನ್ನು, ಬೆಳಗಾಂ ಘಟಕವು, ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳನ್ನು ಹಾಗೂ ಗುಲ್ಬರ್ಗಾ ಘಟಕವು ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳನ್ನು ಒಳಗೊಂಡಿರುತ್ತದೆ.

ಇದಲ್ಲದೆ ಕೋಲಾರ, ತುಮಕೂರು, ಮಂಡ್ಯ ಬಿಜಾಪುರ, ರಾಯಚೂರು ಮತ್ತು ಬೀದರ್ ಜಿಲ್ಲೆಗಳ ಕೇಂದ್ರ ಸ್ಥಾನಗಳಲ್ಲಿ ಸಂಚಾರಿ ದಳಗಳನ್ನು ಮಂಜೂರು ಮಾಡಲಾಗಿದೆ.

ಅ) ಪ್ರತ್ಯೇಕವಾಗಿ ಕೆ.ಜಿ.ಎಫ್. ಹಾಗೂ ಇತರೆ ನಗರಗಳಲ್ಲಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಕಛೇರಿಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. ಮಾಡಿದ್ದೇನೆ. ನೋಡಿದ್ದೇನೆ ಎಂದು ಹೇಳುತ್ತಾರೆ. ಯಾವಾಗ ಮಾಡುತ್ತಾರೆ, ಯಾವಾಗ ನೋಡುತ್ತಾರೆ ಗೊತ್ತಿಲ್ಲ. The answer that is given here is,

``In addition to this, mobile squads has been sanctioned to district headquarters of Kolar, Mandya, Tumkur, Bijapur, Raichur and Bidar" ಎಂದು ಕೇಳಿದ್ದೀರಿ.

ಯಾವಾಗ ಮಾಡುತ್ತೀರಿ? From which date you are going to give? Kolar has got thick population of Sch. Castes and Sch. Tribes. They are being harassed by the police and others. Therefore, I request the hon'ble Minister to kindly look into the matter and let me know when he is going to provide separate shelter to all the Sch. Castes and Sch. Tribes people?

ಅಧ್ಯಕ್ಷರು : ಏನದು? ಏನು ಅವರ ಬೇಡಿಕೆ ಏನು?

ಶ್ರೀ ರಮೇಶ್ ಸಿ. ಜಿಗಜಿಣಗಿ : ಕೆ.ಜಿ.ಎಫ್.ಗೆ ಒಂದು ಸಿ.ಆರ್.ಇ. ಸೆಲ್ ಅಫೀಸ್ ಹಾಕಬೇಕೆಂದು ಕೇಳುತ್ತಿದ್ದಾರೆ. ಸಿ.ಆರ್.ಇ ಸೆಲ್ ತೆಗೆಯುವ ಉದ್ದೇಶ ಏನೆಂದರೆ ಷೆಡ್ಯೂಲ್ ಕಾಸ್ಟ ಜನರ ಮೇಲೆ ದೌರ್ಜನ್ಯ ಆಗಬಾರದು. ಕೆ.ಜಿ.ಎಫ್.ನಲ್ಲಿ ನೂರಕ್ಕೆ ತೊಂಭತ್ತು ಭಾಗ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದವರೇ ಇರುವುದರಿಂದ ಅಲ್ಲಿ ಸಿ.ಆರ್.ಇ. ಸೆಲ್ ತೆಗೆಯುವ ಪ್ರಶ್ನೆನೇ ಬರುವುದಿಲ್ಲ. ಆದರೆ ಅಲ್ಲಿಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಕೆ.ಜಿ.ಎಫ್.ಗೆ ಹೋಗಿ ಬರಲು ಒಂದು ಮೊಬೈಲ್ ಸ್ಕ್ವಾಡನ್ನು ಇಟ್ಟುಕೊಂಡಿದ್ದೇವೆ.

SRI S. RAJENDRAN : The CRE Directorate has got regional offices at Mysore, Mangalore, Gulbarga, Davanagere & Belgaum and the regional office at Bangalore has got jurisdiction of Bangalore, Bangalore rural, Tumkur and Kolar District. ಅಲ್ಲಿರುವ ಬಡವರು ಬೆಂಗಳೂರಿಗೆ ಬಂದು ಕೇಸ್ ಬುಕ್ ಮಾಡುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು : ಕೆ.ಜಿ.ಎಫ್. ನಲ್ಲಿ ಇರುವವರಲ್ಲಿ ಹೆಚ್ಚಿನವರೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿರುವುದರಿಂದ ಅಲ್ಲಿ ಹ್ಯಾರಾಸಮೆಂಟ್ ಪ್ರಶ್ನೆ ಬರುವುದಿಲ್ಲ, ಎಲ್ಲಿ ಸವರ್ಣೀಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹ್ಯಾರ್ಯಾಸಮೆಂಟ್ ಮಾಡುತ್ತಿರುತ್ತಾರೆ ಅಂಥಹ ಜಾಗಗಳಲ್ಲಿ ಇವರ ಕಛೇರಿ ಇರುತ್ತದೆ, ಅಲ್ಲಿ ಇವರು ದೂರುಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಕ್ರಮ

ತೆಗೆದುಕೊಳ್ಳುತ್ತಾರೆ ಈಗಾಗಲೇ ನೀವೇ ಹೇಳಿದಂತೆ ಪರಿಶಿಷ್ಟ ಜಾತಿಯವರು ಹೆಚ್ಚಿಗೆ ಇರುವ ಕಡೆ ಪಿ.ಆರ್.ಇ ಸೆಲನ ಅವಶ್ಯಕತೆ ಎಲ್ಲಿ ಬರುತ್ತದೆ?

SRI S. RAJENDRAN : Sir, harassment is not by upper caste people only, it is harassment by officers also. I cannot just file a case against a police officer. They themselves are harassing. For that to whom I have to give the complaint? I have to go to the CRE Cell only, to safeguard our interests. I cannot straight away file a case. ಒಬ್ಬ ಪೋಲೀಸ್ ಆಫೀಸರ್ ಹತ್ತಿರ ಹೋಗಿ ಕಂಪ್ಲೇಂಟ್ ಬುಕ್ ಮಾಡಿ ಎಂದರೆ, ಕೇಸ್ ಬುಕ್ ಮಾಡುವುದಿಲ್ಲ, ಹೊರಗಡೆ ಹೋಗಿ ಎಂದು ಹೇಳುತ್ತಿದ್ದಾರೆ. ಈ ರೀತಿಯಾದರೆ ನಾವು ಯಾರ ಹತ್ತಿರ ಹೋಗುವುದು? There is thick population of scheduled castes only, I agree.

ಅಧ್ಯಕ್ಷರು : ಆ ಪೋಲಿಸರು ಯಾರು ಎಂಬುದನ್ನು ಗೃಹ ಮಂತ್ರಿಗಳಿಗೆ ಹೇಳಿ, ಅವರೆಲ್ಲರನ್ನೂ ತೆಗೆಸಿಬಿಡೋಣ.

ಶ್ರೀ ಎಸ್. ರಾಜೇಂದ್ರನ್ : ಒಂದು ವರ್ಷದಿಂದಲೂ ಹೇಳುತ್ತಿದ್ದೇನೆ.

MR. SPEAKER : We will discuss it afterwards.

SRI S. RAJENDRAN : Sir, they say they are giving sanction to district headquarters of Kolar, Mandya, Tumkur, Raichur, Bidar & Bijapur,..

MR. SPEAKER : Please don't worry about those places. About KGF, those officers who are harassing, you come and meet me in my office. I will call the Home Minister also. We will get rif of those officers who are harassing the scheduled caste people. We will have good officers and the problem will be solved.

ಡಾ|| ಎಂ. ಪಿ. ಕರ್ಕಿ : ಇಂಥಹ ಜವಾಬ್ದಾರಿಯನ್ನು ತಾವು ತೆಗೆದುಕೊಂಡರೆ ಆಗುತ್ತದೆಯೇ ಇದು ನಿಮ್ಮಿಂದ ಸಾಧ್ಯವಾಗುತ್ತದೆಯೇ? ತಾವೇನು ಮನುಷ್ಯರೋ ಅಥವಾ ಇನ್ಸಟಿಟ್ಯೂಷನ್ನೋ?

ಅಧ್ಯಕ್ಷರು : ಏನು ಮಾಡುವುದು, ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೇ, ಇನ್ನೊಂದು ಪ್ರಶ್ನೆ, the proposal for opening the separate Civil Right Enforcement Directorate at K.G.F and other cities. ಇದನ್ನು ಯಾವಾಗ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.